

# ಪ್ರಮೋದ್ ಪರಪಂಚ

‘ಸಲಾರ್ ಪಾರ್ಟ್ 1 ಸೀಸ್‌ಫೈರ್’ ಸಿನಿಮಾದಲ್ಲಿ ನಟಿಸಿದ್ದ ನಟ ಪ್ರಮೋದ್, ರಮೇಶ್ ಇಂದಿರಾ ನಿರ್ದೇಶನದ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಭಿನ್ನ ಅನುಭವ ನೀಡುವ ಪಾತ್ರಗಳಿಗೆ ತಾವು ಮಣೆ ಹಾಕುವುದಾಗಿ ಪ್ರಮೋದ್ ಹೇಳಿಕೊಂಡಿದ್ದಾರೆ.

ತಮ್ಮ ಸಿನಿಮಾ ಜರ್ನಿ ಬಗ್ಗೆ ಮಾತನಾಡಿರುವ ಅವರು, ‘ಪ್ರತಿ ವರ್ಷ ನಾನು ಸರಿಯಾದ ದಾರಿಯಲ್ಲಿ ಮುಂದಡಿ ಇಡುತ್ತಿದ್ದೇನೆ. ಈ ನಡಿಗೆ ನಿಧಾನ ಇರಬಹುದು. ಆದರೆ ನನ್ನ ಕೈಯಲ್ಲಿ ಕೆಲಸ ಇರುವವರೆಗೂ ನನಗೆ ಅದರ ಬಗ್ಗೆ ಬೇಸರವಿಲ್ಲ. ‘ಗೀತಾ ಬ್ಯಾಂಗಲ್ ಸ್ಟೋರ್’, ‘ರತ್ನನ್ ಪ್ರಪಂಚ’ ಹಾಗೂ ‘ಸಲಾರ್ 1’… ಹೀಗೆ ಕೆಲವು ಸಿನಿಮಾಗಳಲ್ಲಿ ನಟಿಸಿದ್ದು ನನಗೆ ಒಳ್ಳೆಯ ರೆಕಗ್ನಿಷನ್ ತಂದುಕೊಟ್ಟಿದೆ. ಇದು ಸಿನಿಮಾಕ್ಷೇತ್ರದ ಯಾವುದೇ ಹಿನ್ನೆಲೆಯಿಲ್ಲದೆ ಬಂದ ನನ್ನಂಥ ನಟರಿಗೆ ಬಹಳ ಮುಖ್ಯ ಸಂಗತಿ’ ಎಂದು ಹೇಳಿಕೊಂಡಿದ್ದಾರೆ.

ಮಾಸ್ ಅಪೀಲ್‌ಗಿಂತ ಭಿನ್ನವಾಗಿ ಗುರುತಿಸಿಕೊಳ್ಳುವಂಥ ಪಾತ್ರಗಳಿಗೆ ಪ್ರಾಮುಖ್ಯ ನೀಡುವುದಾಗಿ ಹೇಳುವ ಅವರಲ್ಲಿ, ಜನರಿಗೆ ಹತ್ತಿರವಾಗಲು ಇದೇ ಉತ್ತಮ ಮಾರ್ಗ ಎಂಬ ಅಭಿಪ್ರಾಯವೂ ಇದೆ. ‘ಸಲಾರ್ ಭಾಗ 2’ರಲ್ಲಿಯೂ ಪ್ರಮೋದ್ ಕಾಣಿಸಿಕೊಳ್ಳುತ್ತಿದ್ದು, ಮೊದಲನೇ ಭಾಗಕ್ಕಿಂತ ಹೆಚ್ಚಿನ ಸ್ಕ್ರೀನ್ ಪ್ರೆಸೆನ್ಸ್ ಇರುವುದಾಗಿ ತಿಳಿಸಿದ್ದಾರೆ.

ರಮೇಶ್ ಇಂದಿರಾ ನಿರ್ದೇಶಿಸುತ್ತಿರುವ ಸಿನಿಮಾ ಕುರಿತಾಗಿ ಮಾತನಾಡುತ್ತಾ, ‘‘ಯೂಥ್‌ಫುಲ್ ಹಾಗು ಕುಟುಂಬ ಆಧರಿತ ವಿಷಯದ ಮೇಲೆ ರೂಪಿಸಿರುವ ಈ ಸಿನಿಮಾದಲ್ಲಿ ಥ್ರಿಲ್ಲರ್ ಅಂಶಗಳು ಹೆಣೆದುಕೊಂಡಿವೆ. ನನ್ನ ‘ಪ್ರೀಮಿಯರ್ ಪದ್ಮಿನಿ’ ಸಿನಿಮಾ ತಂಡವೇ ಇದಾಗಿರುವುದರಿಂದ ಕೆಲಸ ಉತ್ತಮವಾಗಿ ಸಾಗಲಿದೆ’’ ಎಂದು ಮಾಹಿತಿ ನೀಡಿದ್ದಾರೆ.

ಈಗ ಸ್ಕ್ರಿಪ್ಟ್ ಆಯ್ಕೆಯಲ್ಲಿ ಬಹಳ ಎಚ್ಚರಿಕೆಯಿಂದ ಅಡಿಯಿಡುವುದಾಗಿ ಹೇಳುವ ಅವರು, ಕೆಲವು ಸಿನಿಮಾಗಳ ಸ್ಕ್ರಿಪ್ಟ್ ಆಯ್ಕೆ ನನಗೆ ಪಾಠ ಕಲಿಯಲು ಪ್ರೇರಣೆಯಾಗಿದೆ ಎಂದು ಹೇಳುತ್ತಾರೆ.

‘ಈಗ ಸಿನಿಮಾವನ್ನು ಜನರ ಮುಂದೆ ಇಡುವುದೇ ದೊಡ್ಡ ಸವಾಲು. ಸಿನಿಮಾರಂಗದ ಈ ಆಟದಲ್ಲಿ ಹೆಚ್ಚು ದಿನ ಉಳಿಯಬೇಕೆಂದರೆ ಸಿನಿಮಾಕ್ಷೇತ್ರದ ವ್ಯವಹಾರ ಅರಿಯುವುದೂ ತುಂಬಾ ಮುಖ್ಯ’ ಎಂದಿದ್ದಾರೆ. ■

# ಪಾತ್ರಗಳೇ ಪ್ರೇರಣೆ

‘ಕೊಟ್ಟ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು, ಆ ಪಾತ್ರ ಕೊಡುವ ಸವಾಲನ್ನು ಉಪಯೋಗಿಸಿಕೊಳ್ಳಬೇಕು. ಅದೇ ಕಲಾವಿದರ ಸಾಮರ್ಥ್ಯ, ಕೌಶಲವನ್ನು ಅರಳಿಸುವ ಶಕ್ತಿ’ ಎಂದಿದ್ದಾರೆ ನಟಿ ಭೂಮಿ ಶೆಟ್ಟಿ.

ಕನ್ನಡ ಕಿರುತೆರೆಯಿಂದ ತಮ್ಮ ನಟನಾ ಬದುಕು ಆರಂಭಿಸಿದ ಭೂಮಿ ಶೆಟ್ಟಿ, ತೆಲುಗು ಕಿರುತೆರೆಯಲ್ಲೂ ತಮ್ಮ ಛಾಪು ಮೂಡಿಸಿದವರು. ತಮಗೆ ಸಿಕ್ಕಿದ ಪಾತ್ರಗಳನ್ನು ಶ್ರದ್ಧೆಯಿಂದ ನಿರ್ವಹಿಸಿದವರು. ಕೊರೊನಾ ಸಮಯದಲ್ಲಿ ಬಿಡುಗಡೆಯಾದ ‘ಇಕ್ಕಟ್’ ಅವರ ಸಾಮರ್ಥ್ಯಕ್ಕೆ ಒಂದೊಳ್ಳೆಯ ನಿದರ್ಶನವೂ ಆಯಿತು.

‘ನನಗೆ ಬಂದಂಥ ಪಾತ್ರಗಳು ನಾನು ಆಫ್ ಸ್ಕ್ರೀನ್‌ನಲ್ಲಿರುವುದಕ್ಕಿಂತ ಸಂಪೂರ್ಣ ಭಿನ್ನವಾಗಿರುತ್ತಿದ್ದವು. ವಯಸ್ಸಿಗೆ ತಕ್ಕಂಥ ಪಾತ್ರಗಳು ಸಿಕ್ಕಿದ್ದು ಅಪರೂಪ. ನಾನು ಆ ಪಾತ್ರಗಳಿಗೆ ಚೆನ್ನಾಗಿ ಒಪ್ಪುತ್ತೇನೆ ಎಂದು ನಿರ್ದೇಶಕರಿಗೆ ಅನ್ನಿಸಿರಬೇಕು. ಆ ಬಗ್ಗೆ ನನಗೆ ಯಾವುದೇ ದೂರು ಇಲ್ಲ. ಆದರೆ ಆ ಪಾತ್ರಗಳು ಕೊಡುವಂಥ ಸವಾಲನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಳ್ಳುವುದನ್ನು ಕಲಿತಿದ್ದೇನೆ’ ಎನ್ನುತ್ತಾರೆ ಭೂಮಿ.

ಒಂದೊಂದು ಪಾತ್ರಗಳೂ ತಮ್ಮ ನಟನಾ ಶೈಲಿಯನ್ನು ಪ್ರಯೋಗಿಸಲು ನಟರಿಗೆ ದಾರಿಗಳು ಎನ್ನುವ ಅವರು, ‘ನಾನು ನಟಿಸುವಾಗ ಆ ಪಾತ್ರದ ಬಗ್ಗೆ ಮಾತ್ರ ಯೋಚಿಸುತ್ತೇನೆ. ನನ್ನಿಂದ ಆ ಪಾತ್ರಕ್ಕೆ ಎಷ್ಟು ನ್ಯಾಯ ನೀಡಲು ಸಾಧ್ಯವೋ ಅಷ್ಟು ನೀಡುತ್ತೇನೆ’ ಎನ್ನುತ್ತಾರೆ.

ಈ ಆತ್ಮವಿಶ್ವಾಸವೇ ಇದೀಗ ತಮಿಳು ಸಿನಿಮಾರಂಗದಲ್ಲೂ ಅವರಿಗೆ ಅವಕಾಶವನ್ನು ಸೃಷ್ಟಿಸಿದೆ. ಶಿವ ಗಣೇಶ್ ನಿರ್ದೇಶನದ ತಮಿಳು ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿರುವ ಅವರು, ‘ನಿರ್ದೇಶಕರು ನನ್ನ ಪ್ರೊಫೈಲ್ ನೋಡಿ, ಆ ಪಾತ್ರಕ್ಕೆ ನನ್ನನ್ನು ಆರಿಸಿದ್ದಾರೆ. ಹೊಸ ಭಾಷೆ, ಸಿನಿಮಾರಂಗದ ಬಗ್ಗೆ ನನಗೆ ತುಂಬಾ ಎಕ್ಸೈಟ್‌ಮೆಂಟ್ ಇದೆ’ ಎಂದು ಉತ್ಸಾಹದಿಂದ ಹೇಳಿಕೊಂಡಿದ್ದಾರೆ. ■

